ಅ) ಈಗ ಕರ್ನಾಟಕದ ಹೆಮ್ಮೆಯ ಮಹಿಳಾ ಶಿಕ್ಷಕಿಯರನ್ನು ತರಬೇತಿ ಪಡಿಸುವ ಧಾರವಾಡದ ಶೈಕ್ಷಣಿಕ ಮಹಾನಗರದ ಸಂಸ್ಥೆಯಲ್ಲಿ ಈಗ ಶತಮಾನೋತ್ಸವ ಆಚರಿಸಬೇಕಾದ ಐತಿಹಾಸಿಕ ವರ್ಷದಲ್ಲಿ ಕಟ್ಟಿಸಬೇಕಾಗಿರುವ ಕಟ್ಟಡಗಳು ಯಾವುದು ಅವುಗಳ ಬಗ್ಗೆ ಸರ್ಕಾರ ಕಟ್ಟಡಗಳು ಕ್ರಮ ತೆಗೆದುಕೊಂಡಿದೆ. ತಿಳಿಸುವಿರಾ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಇದೆ.

ಆ)

		ಅಂದಾಜು ವೆಚ್ಚ
1)	ಶತಮಾನೋತ್ಸವ ಭವನ	12.00 ಲಕ್ಷ
2)	ವಸತಿ ಗೃಹ	20.00 ಲಕ್ಷ
3)	ಶಾಲಾಲಯ	3.00 ಲಕ್ಷ
4)	ಕ್ರಾಫ್ಟ್ ರೂಂ, ವರ್ಗಕೋಣೆ, ಪ್ರಯೋಗಾಲಯ ವಾಚನಾಲಯ	15.00 ಲಕ್ಷ

ಆರ್ಥಿಕ ಅನುಕೂಲತೆಯನ್ನು ಗಮನದಲ್ಲಿಟ್ಟು ಕೊಂಡು 1996-97ನೇ ಸಾಲಿನಿಂದ ಈ ಬಗ್ಗೆ ಹಂತ ಹಂತವಾಗಿ ಕ್ರಮ ತೆಗೆದುಕೊಳ್ಳಲಾಗುವುದು.

ಧಾರವಾಡ ಆರ್.ಎನ್. ಶೆಟ್ಟಿ ಕ್ರೀಡಾಂಗಣ ಕುರಿತು

367 - ಶ್ರೀ ಚಂದ್ರಕಾಂತ ಜಿ. ಬೆಲ್ಲದ (ಧಾರವಾಡ) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಧಾರವಾಡದ ಆರ್.ಎನ್. ಶೆಟ್ಟಿ ಕ್ರೀಡಾಂಗಣದಲ್ಲಿ ಎಲ್ಲಾ ವಿಧವಾದ ಆಟಗಳು ನಡೆಯಲು ಅವಕಾಶವಿದೆಯೇ? ಹಾಗೂ ವರ್ಷದ ಪೂರ್ಣ ಅವಧಿಯಲ್ಲಿ ಸದರಿ ಆಟದ ಬಯಲು ಉಪಯೋಗವಾಗುತ್ತಿರುವುದು ನಿಜವೇ?

2) ಧಾರವಾಡ ಎರಡು ವಿಶ್ವವಿದ್ಯಾನಿಲಯ ಪಡೆದ ಕಲಾ ಶೈಕ್ಷಣಿಕ ನಗರದಲ್ಲಿ ಒಳಾಂಗಣ ಆಟಗಳ ಬಗ್ಗೆ ಕಟ್ಟಡದ ಹಾಗೂ ಸಾಲತ್ತಿನ ಪೂರೈಕೆಯ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3) ಈ ಎಲ್ಲಾ ಪ್ರಕರಣದ ಆಟಗಳಿಗಾಗಿ ಬೆಂಗಳೂರಿನಂತೆ ಎರಡನೆಯ ಮಹಾನಗರ ಧಾರವಾಡದಲ್ಲಿ ಸೌಲಭ್ಯಗಳನ್ನು ಒದಗಿಸಲು ಸರ್ಕಾರದಲ್ಲಿ ಇರುವ ಯೋಜನೆಗಳಾವುವು?

ಶ್ರೀ ಅಜಯಕುಮಾರ್ ಸರನಾಯಕ್ (ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು) :

1) ಹೌದು.

ಹೌದು.

2) ಇಲ್ಲ.

3) ಒಳಾಂಗಣ ಕ್ರೀಡಾಂಗಣ ಮಾಡುವ ಸಾಧ್ಯತೆ ಈ ಮಹಾನಗರದಲ್ಲಿ ಇರುತ್ತದೆ.

ಕೋಲಾರ ಜಿಲ್ಲೆಯ ಆರೋಗ್ಯ ಇಲಾಖೆಯಲ್ಲಿ ಖರೀದಿಗೆ ಸಂಬಂಧವಾಗಿ ನಡೆದಿರುವ ಅವ್ಯವಹಾರ.

368 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ವಾರ್ತಾ ಮತ್ತು ಪ್ರಚಾರ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯ ಆರೋಗ್ಯ ಇಲಾಖೆಯಲ್ಲಿ ಖರೀದಿ ಸಂಬಂಧವಾಗಿ ನಡೆದಿರುವ ಅವ್ಯವಹಾರಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗೆ ಬಂದಿದ್ದರೆ ಎಷ್ಟು ಹಣದ ಅವ್ಯವಹಾರ ನಡೆದಿದೆ?

ಇ) ಇದರ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ. ಸಿ. ನಾಣಯ್ಯ (ವಾರ್ತಾ ಮತ್ತು ಪ್ರಚಾರ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಬಂದಿದೆ.

ಆ) ಮತ್ತು ಇ) ಈ ವ್ಯವಹಾರದ ಸತ್ಯಾಸತ್ಯತೆಯನ್ನು ಕಂಡು ಹಿಡಿಯಲು ಸರ್ಕಾರಿ ಮಟ್ಟದಲ್ಲಿ ಸರ್ಕಾರದ ಕಾರ್ಯದರ್ಶಿ- 2, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ದಿ|| 30-1-96ರ ಸರ್ಕಾರಿ ಆದೇಶದಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ, ಹಾಗೂ ಎರಡು ತಿಂಗಳ ಒಳಗೆ ವರದಿ ಸಲ್ಲಿಸಬೇಕೆಂದು ತಿಳಿಸಲಾಗಿದೆ.

ರಾಜ್ಯದಲ್ಲಿರುವ ಅನುದಾನ ಮತ್ತು ಅನುದಾನ ರಹಿತ ಕಾಲೇಜುಗಳು.

370 - ಶ್ರೀ ಜೆ.ಎ. ಫರ್ನಾಂಡಿಸ್ (ನಾಮನಿರ್ದೇಶನ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ, ಖಾಸಗಿ ಅನುದಾನಿತ ಹಾಗೂ ಅನುದಾನರಹಿತ ಅಧೀನ ಪದವಿ ಕಾಲೇಜುಗಳ ಒಟ್ಟು ಸಂಖ್ಯೆ ಎಷ್ಟು? (ಕಾಲೇಜುವಾರು ವಿವರಗಳನ್ನು ಒದಗಿಸುವುದು)

ಆ) ಅವುಗಳಲ್ಲಿ ಎಷ್ಟು ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದಾರೆ?

ಇ) ಅಂತಹ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳಿಗೆ ಉಂಟಾದ ಒಟ್ಟಾರೆ ವೆಚ್ಚವೆಷ್ಟು?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :